## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ದಾಂಡೇಲಿ.

**ಸಿ.ಸಿ.ನಂ. 355-2017**

| | | |
|---|---|---|
| ಫಿರ್ಯಾದಿ | : | ಕರ್ನಾಟಕ ಸರ್ಕಾರ ಪರವಾಗಿ ಪೋಲಿಸ್ ವೃತ್ತ ನೀರಿಕ್ಷಕರು, ದಾಂಡೇಲಿ ವೃತ್ತ |

ವಿರುದ್ಧ

| | | |
|---|---|---|
| ಆರೋಪಿತ | : | ಬಿಲಾಲ ತಂದೆ ಜೈಲಾನಿ ಶಮಶೇರ<br>ವಯಾಃ 37 ವರ್ಷ, ವೃತ್ತಿಃ ಚಾಲಕ<br>ವಾಸ ಃ ಮನೆ ನಂ. 208, ಮಸಿದಿಗಲ್ಲಿ,<br>ಖಾನಾಪೂರ, ಜಿಲ್ಲಾ ಬೆಳಗಾವಿ. |

### ಆಪಾದನೆ

ಆರೋಪಿಯಾದ ನೀವು ದಿನಾಂಕಃ 07-06-2017 ರಂದು ರಾತ್ರಿ 7-45 ಗಂಟೆಗೆ ದಾಂಡೇಲಿ ನಗರ ಪೋಲಿಸ ಪೋಲಿಸ್ ಠಾಣಾ ಸರಹದ್ದ ದಾಂಡೇಲಿ ಅಂಬೆವಾಡಿಯ ಖಾನ್ಸವುಡ್ಸ ಫರ್ನಿಚರ ಶಾಪ್ ಎದುರಿನ ಭರ್ಚಿ ರಸ್ತೆಯಲ್ಲಿ, ನೀನು ಚಲಾಯಿಸುತ್ತಿದ್ದ ಲಾರಿ ನಂಬರ. ಕೆಎ-01-ಎ-0899 ನೇದನ್ನು ಪೋಲ್ಸ್(ಕಟ್ಟಿಗೆ)ನ್ನು ತುಂಬಿಕೊಂಡು ಭರ್ಚಿ ಕಡೆಯಿಂದ ದಾಂಡೇಲಿ ಕಡೆಗೆ ಬರಲು ಅತೀ ವೇಗ ಮತ್ತು ಅಜಾಗರೂಕತೆಯಿಂದ ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು ದಾಂಡೇಲಿ ಕಡೆಯಿಂದ ಭರ್ಚಿ ಕಡೆಗೆ ಹೋಗುತ್ತಿದ್ದ ಮೋಟಾರ ಸೈಕಲ್ ನಂ. ಕೆಎ-31, ಕ್ಯೂ-9273 ನೇದಕ್ಕೆ ಡಿಕ್ಕಿ ಹೊಡೆದು ಅಪಘಾತಪಡಿಸಿ, ಈ ಮೂಲಕ ನೀವು ಭಾ.ದಂ.ಸಂ. ಕಲಂ 279 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಎರಡನೇಯ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನಿಮ್ಮ ಈ ಮೇಲಿನ ಕೃತ್ಯದಿಂದಾಗಿ ಬೈಕ್ ಸವಾರ ಮೃತ ಮಹಮ್ಮದಸಾಧೀಕ ತಂದೆ ಅಬ್ದುಲಗಣಿ ಮುಜಾವರ ಈತನಿಗೆ ಬೈಕ ಸಮೇತ ರಸ್ತೆಯ ಮೇಲೆ ಬಿಳಿಸಿ , ಅವನ ತಲೆಯ ಮೇಲೆ ಹಾಗೂ ಕೈಮೇಲೆ ಟೈಯರನ್ನು ಹಾಯಿಸಿ ತೀವ್ರ ರಕ್ತಗಾಯಪಡಿಸಿ ಆತನ ಮೃತಪಡುವಂತೆ ಅಪಘಾತಪಡಿಸಿ ಈ ಮೂಲಕ ನೀವು ಭಾ.ದಂ.ಸಂ. ಕಲಂ 304-ಎ ರ ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರಶ್ನೆ : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ :

ಪ್ರಶ್ನೆ : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ?

ಉತ್ತರ :

**(ಆರೋಪಿತರಿಗೆ ಆಪಾದನೆಯ ಸಾರಾಂಶವನ್ನು ಆತನಿಗೆ ತಿಳಿದ ಭಾಷಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.)**

ದಾಂಡೇಲಿ

ದಿಃ 19-03-2018 ಪ್ರ.ದ.ನ್ಯಾ.ದಂ., ದಾಂಡೇಲಿ

ಈ ಮೇಲೆ ತಿಳಿಸಿದ ಅಪಘಾತದಲ್ಲಿ ನಿಮ್ಮ ನೋಂದಣಿಯಾಗದ ಮೋಟಾರ್ ಸೈಕಲ್ಲನ್ನು ಚಾಲನಾ ಪತ್ರವಿಲ್ಲದೇ ಚಲಾಯಿಸಿಕೊಂಡು ಬಂದು ಅಪರಾಧವೆಸಗಿ, ಈ ಮೂಲಕ ನೀವು ಮೋಟಾರ್ ವಾಹನಗಳ ಕಾಯ್ದೆ ಕಲಂ 3 ಸಹವಾಚಕ ಕಲಂ 181 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವು ನೋಂದಣಿ ಮಾಡಿಸದೇ ಇರುವ ನಿಮ್ಮ ಮೋಟಾರ್ ಸೈಕಲ್ಲನ್ನು ಚಲಾಯಿಸಿಕೊಂಡು ಬಂದು ಅಪರಾಧವೆಸಗಿ, ಈ ಮೂಲಕ ನೀವು ಮೋಟಾರ್ ವಾಹನಗಳ ಕಾಯ್ದೆ ಕಲಂ 192 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ನೀವು ನಿಮ್ಮ ಮೋಟಾರ್ ಸೈಕಲ್ಲಿಗೆ ವಿಮೆ ಮಾಡಿಸದೇ ಚಲಾಯಿಸಿಕೊಂಡು ಬಂದು ಅಪರಾಧವೆಸಗಿ, ಈ ಮೂಲಕ ನೀವು ಮೋಟಾರ್ ವಾಹನಗಳ ಕಾಯ್ದೆ ಕಲಂ 196 ಕಾಯ್ದೆಯಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯಲ್ಲಿ ಮಾಡಿರುತ್ತೀರಿ.

ಪ್ರಶ್ನೆ : ಈಗ ಓದಿ ಹೇಳಿದ ಆಪಾದನೆಯ ಸಾರಾಂಶ ನಿಮಗೆ ತಿಳಿಯಿತೇ ?

ಉತ್ತರ :

ಪ್ರಶ್ನೆ : ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆಯಾಗಬೇಕೇ?

ಉತ್ತರ :

**(ಆರೋಪಿತರಿಗೆ ಆಪಾದನೆಯ ಸಾರಾಂಶವನ್ನು ಆತನಿಗೆ ತಿಳಿದ ಭಾಷಯಲ್ಲಿ ಓದಿ ಹೇಳಿ, ಕೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು.)**

ಹಳಿಯಾಳ.

ದಿಃ 08-06-2015. ಪ್ರ.ದ.ನ್ಯಾ.ದಂ., ಹಳಿಯಾಳ.